## ಕುತೂಹಲಕಾರಿ 'ಸಂಚು'

'ಸಂಚು' (ಸೆ. 26, ಪಿ.ಬಿ. ಪ್ರಸನ್ನ) ಕಥೆ ನೈಜ ಘಟನೆಗಳನ್ನೇ ಬಿಂಬಿಸುವಂತಿದೆ. ಕಥೆ ಓದುತ್ತಾ ಬೆಂಗಳೂರಿನ ವಕೀಲೆ ಶುಭಾ ಪ್ರಕರಣ ನೆನಪಿಗೆ ಬಂತು. ರಾಜೇಶ ತನ್ನ ಮನೆ ಜವಾಬ್ದಾರಿ ಮುಗಿಸಿ ಮದುವೆಯಾಗಲು ಮನಸ್ಸು ಮಾಡಿದ್ದಾಗ, ಹುಡುಗಿಯು ಮುಗ್ಧಳಂತೆ



ನಟಿಸಿ ಭಾವೀ ಪತಿಯನ್ನು ಕೊಲ್ಲಲು ಸಂಚು ಹೂಡಿದ ಬಗೆ ಕಂಡು ಆಘಾತವಾಯಿತು. ಕೂದಲೆಳೆಯ ಅಂತರದಲ್ಲಿ ರಾಜೇಶನ ಬಡಜೀವ ಉಳಿಯಿತು.

– ರಮೇಶ್ ಮಳವಳ್ಳಿ, ಬೆಂಗಳೂರು




## ಸೆಣಬಿನ ಮೌಲ್ಯವರ್ಧನೆಯೊಂದೇ ದಾರಿ

'ಸೆಣಬು– ಸೆಣಸು; ಭಾರತದಲ್ಲಿ ಗೋಲ್ಡನ್ ಫೈಬರ್ ಹೊಳಪು ಕುಂದುತ್ತಿರುವುದೇಕೆ?' (ಸೆ. 26, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನ ಸೆಣಬಿನ ಕುರಿತ ವಿಸ್ತೃತ ಮಾಹಿತಿಯನ್ನು ಒಳಗೊಂಡಿದೆ. ಈಗ ಸೆಣಬಿನ ಉತ್ಪನ್ನಗಳ ಮೌಲ್ಯವರ್ಧನೆ ಮಾಡುವುದು ಬಹು ಅವಶ್ಯಕವಾಗಿದೆ. ಆಗ ನಾವೆಲ್ಲ ಸೆಣಬಿನಿಂದ ಮಾಡಲಾದ ಗೋಣಿಚೀಲವನ್ನು ಕೊಪ್ಪ ಮಾಡಿ ತಲೆ ಮೇಲೆ ಹೊದ್ದು ಮಳೆಗಾಲದಲ್ಲಿ ಓಡಾಡುತ್ತಿದ್ದೆವು. ಆಗ ಕಾಲೊರೆಸಲು ಹೊಸ್ತಿಲ ಬಳಿ ಗೋಣಿಚೀಲವನ್ನೇ ಹಾಕುತ್ತಿದ್ದರು. ಚಳಿಗಾಲದಲ್ಲಿ ನೆಲದ ಮೇಲೆ ಹಾಸಲೂ, ಹೊದೆಯಲೂ ಸೆಣಬು ಉಪಯೋಗವಾಗುತ್ತಿತ್ತು. ಗೋಣಿ ತಾಟುಗಳೂ ಬಳಕೆಯಲ್ಲಿದ್ದವು. ಸಕ್ಕರೆ ಮೂಟೆ, ಉಪ್ಪಿನ ಮೂಟೆಗಳು ಗೋಣಿಯದ್ದೇ ಆಗಿದ್ದವು. ಈಗ ಗೋಣಿ ಜಾಗದಲ್ಲಿ ಪ್ಲಾಸ್ಟಿಕ್ ಕುಳಿತಿದೆ. ಸೆಣಬಿನ ಉತ್ಪನ್ನಗಳಿಗೆ ಬೇಡಿಕೆ ಬರಬೇಕಾದರೆ ಉದಯೋನ್ಮುಖ ತಂತ್ರಜ್ಞಾನ ಆಧುನಿಕ ವಿನ್ಯಾಸ, ಮಾದರಿಗಳನ್ನು ಅಳವಡಿಸಿ ಮೌಲ್ಯವರ್ಧನೆ ಮಾಡಬೇಕು. ಉತ್ಪನ್ನಗಳು ಜನರಿಗೆ ಇಷ್ಟವಾಗುವ ಹಾಗೆ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಬೇಕು.

–ಟಿ. ಶಿವಮೂರ್ತಿ ಉಪ್ಪಾರ,
ಚಾಮರಾಜನಗರ

## ಸಂಚು ಬಯಲಾಯಿತು

'ಸಂಚು' ಚೆನ್ನಾಗಿದೆ. ಅವನ ಕೈಗೆ ಮೊಬೈಲ್ ಕೊಟ್ಟಿದ್ದು ಒಳ್ಳೆಯದೇ ಆಯಿತು. ಅವಳ ಪ್ರೀತಿ ವಿಚಾರ ತಿಳಿದು ಅವಳ ಇನ್ನೊಂದು ಮುಖವಾಡ ಕಳಚಿತು. ಮಾಡಿದ 'ಸಂಚು' ಬಯಲಾಯಿತು. ಒಂದು ಜೀವ ಉಳಿಯಿತು.

–ಜಯಲಕ್ಷ್ಮಿ ಉಪಾಧ್ಯಾಯ,
ಕಂಚಾರ್ತಿ

## ಸ್ಫೂರ್ತಿದಾಯಕ ಯಶೋಗಾಥೆ

'ಶಾಂತಪಥ ಸ್ಫೂರ್ತಿಗಾಥ' (ಸೆ. 19, ನೇಮಿಚಂದ್ರ) ಮುಖಪುಟ ಲೇಖನ ಎಲ್ಲ ಮಹಿಳೆಯರಿಗೂ ಮತ್ತು ಪುರುಷರಿಗೂ ಸ್ಫೂರ್ತಿದಾಯಕವಾಗಿದೆ. ಶಾಂತಾ ಮೇಡಂ ಸಾಧನೆ ಹಾಗೂ ಅವರಿಗೆ ಪೂರ್ಣ ಸಹಕಾರ ನೀಡಿದ ವಿಜಯ ರಾಘವನ್ ಅವರು ಶ್ಲಾಘನಾರ್ಹರು. ಈ ಎಂಜಿನಿಯರ್ ದಂಪತಿಗೆ ಸಲಾಂ. ಸಾಧಕರ ಇಂಥ ಯಶೋಗಾಥೆಗಳು ಇನ್ನಷ್ಟು ಪ್ರಕಟಗೊಳ್ಳಲಿ.

–ಬಸವರಾಜ ಕೆಂಗನಾಳ ಮುಳವಾಡ,
ವಿಜಯಪುರ

## ವರ್ಣಮಯ ಕವನ

'ಹಾದಿಬದಿಯ ಚೆಲುವೆಯರು' (ಸೆ. 26, ಲೋಕೇಶ್ ಮೊಸಳೆ) ಚಿತ್ರಪಟ ಕಥನ ವರ್ಣಮಯ ಕವನದಂತಿದೆ. ಮಳೆಗಾಲದ ಕೊನೆಯ ದಿನಗಳಲ್ಲಿ ಕಾಣಿಸಿಕೊಳ್ಳುವ ಈ ನಿರಾಭರಣ ಸುಂದರಿಯರು ತಮ್ಮ ಸಹಜ ಸೌಂದರ್ಯದಿಂದ ರಸಿಕರ ಮನಸೂರೆಗೊಳ್ಳುತ್ತಾರೆ.

–ಆಕರ್ಷನ್, ಮೂಡುಬಿದಿರೆ



'ಹಾದಿಬದಿಯ ಚೆಲುವೆಯರು' 'ಇದೆಕೋ ಹಾದಿಯ ಬದಿಯಲಿ ಹುಲ್ಲಲಿ ವಿಷ್ಣುಕ್ರಾಂತಿಯ ಪರಿಮಿತ ನೀಲ!' ಎಂಬ ಮಾಸ್ತಿಯವರ ಉದ್ಗಾರ ನೆನಪಾಯಿತು. (ವಿಷ್ಣುಕ್ರಾಂತಿ ಒಂದು ಹೂವು).

–ಸಿಪಿಕೆ, ಮೈಸೂರು

## ಸುರಸುಂದರ ಸುಮಗಳು

ಹೂವುಗಳ ಕುರಿತ ಚಿತ್ರಲೇಖನ ಬಹಳ ಸುಂದರವಾಗಿದೆ. ದಿನನಿತ್ಯ ನಾವು (ಹಳ್ಳಿಗರು) ಹೊಲದ ಕೆಲಸಗಳಿಗೆ ಹೋಗುವಾಗ, ಬರುವಾಗ ಬೀದಿಬದಿಯ ಈ ಸುರಸುಂದರ ಸುಮಗಳು ನಮ್ಮ ಕಣ್ಣಿಗೆ ಸಾಮಾನ್ಯವಾಗಿ ಬಿದ್ದೇ ಬೀಳುತ್ತವೆ. ಇವುಗಳನ್ನು ನೋಡಿ ಆನಂದಿಸುವ ಕಣ್ಣು, ಸೌಂದರ್ಯಾರಾಧಕ ಮನಸ್ಸು (ಸಮಯ) ಬೇಕು. ಇಂಥ ಚಿತ್ತಾಕರ್ಷಕ ಹೂ–ಗಿಡಗಂಟೆಗಳು ವಸತಿ, ಕೃಷಿ ಬದುಕಿಗಾಗಿ ಮರೆಯಾಗುತ್ತಿರುವುದು ಸುಳ್ಳಲ್ಲ. ಪಟ್ಟಣ, ನಗರಗಳಲ್ಲಿ ಈ ತಾಣಗಳು ಸಿಗುವುದು ಅಪರೂಪವೇ ಸೈ!

ಈ ಕಾಡು ಕುಸುಮಗಳನ್ನು ಉತ್ತಮ ಛಾಯಾಗ್ರಹಣ, ಸಂಕ್ಷಿಪ್ತ ನಿರೂಪಣೆ ಮೂಲಕ ಕಣ್ಮುಂದೆ ತಂದ ಲೇಖಕರಿಗೆ ಧನ್ಯವಾದ.

–ಕೊಹಿಮ ಬಸರಕೋಡು

## ನೆರವು ಅತ್ಯಗತ್ಯ

'ಬರದ ನಾಡಿನ ಪಾಠಗಳು' (ಸೆ. 26, ಅಕ್ಷತಾ ಕುದ್ಕೋಳಿ) ಲೇಖನದಲ್ಲಿ ನಮೀಬಿಯಾದಲ್ಲಿನ ಬರಗಾಲದ ಚಿತ್ರಣ ಕಂಡು ಕಣ್ಣಾಲಿಗಳು ತುಂಬಿದವು. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಸಣ್ಣ ನೆರವು ನೀಡಿದರೂ ಆಫ್ರಿಕಾದ ಪುಟ್ಟರಾಷ್ಟ್ರ ಖಂಡಿತ ಬರದ ಬೇಗೆಯಿಂದ ಹೊರಬರಲು ಸಾಧ್ಯ.

–ಯಲುವಹಳ್ಳಿ ಸೊಣ್ಣೇಗೌಡ
ಚಿಕ್ಕಬಳ್ಳಾಪುರ



## ಪಾಠ ಕಲಿಯಬೇಕಿದೆ

ನಮೀಬಿಯಾದಲ್ಲಿ ಕಾಡುಪ್ರಾಣಿಗಳನ್ನೇ ಕೊಂದು ತಿನ್ನುವಂಥ ಭೀಕರ ಬರಗಾಲ ಅಪ್ಪಳಿಸಿರುವ ವಿಷಯ ಆತಂಕಕಾರಿ. ಬೇರೆ ದೇಶಗಳು ಪಾಠ ಕಲಿಯಬೇಕಾಗಿದೆ.

–ಮೋಹನ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in